ಅಧ್ಯಕ್ಷರು.— ಕ್ಲಾರಿಫಿಕೇಷನ್‌ಗೆ ಅವಕಾಶ ಇಲ್ಲ. ತಾವು ಕುಳಿತುಕೊಳ್ಳಿ.

೬) ರೋಣ ತಾಲ್ಲೂಕಿನ ಗಜೇಂದ್ರಗಡದಲ್ಲಿ ೩೩ ಕೆ. ವಿ. ಸ್ಟೇಷನ್‌ನ್ನು ನಿರ್ಮಾಣ ಮಾಡಲು ಒತ್ತಾಯ

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.— ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆ ರೋಣ ತಾಲ್ಲೂಕು ವಿದ್ಯುತ್ ಪರಿಸ್ಥಿತಿಯು ಸುಧಾರಿಸಬೇಕಾದರೆ, ನರೇಗಲ್ಲದಲ್ಲಿ ೧೧೦ ಕೆ. ವಿ. ಸ್ಟೇಷನ್ ನಿರ್ಮಾಣದ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವುದು ಅವಶ್ಯಕ ಇದ್ದು, ಈಗಾಗಲೇ ಸಂಬಂಧಪಟ್ಟಂತೆ, ಭೂಸ್ವಾಧೀನ ಕೆಲಸವೂ ಮುಗಿದಿದ್ದು ಉಪಕರಣಗಳೂ ಲಭ್ಯ ಇರುವುವು, ಗದಗದಿಂದ ನರೇಗಲ್ಲದವರೆಗೆ ೧೧೦ ಕೆ. ವಿ. ಲೈನ್ ಎಳೆಯುಬೇಕು. ನರೇಗಲ್ಲ–ಗಜೇಂದ್ರಗಡಕ್ಕೆ ಲೈನನ್ನು ಎಳೆಯುತ್ತಿದ್ದು, ಗಜೇಂದ್ರಗಡದಲ್ಲಿ ೩೩ ಕೆ ವಿ. ಸ್ಟೇಷನ್ ನಿರ್ಮಾಣ ಕೆಲಸವೂ ಇನ್ನೂ ತ್ವರಿತಗತಿಯಿಂದ ಸಾಗಬೇಕಾಗಿದೆ. ಅಂದರೆ ವಿದ್ಯುತ್ ಪರಿಸ್ಥಿತಿ ಸುಧಾರಿಸುವುದು. ಈ ಬಗ್ಗೆ ತೀವ್ರ ಕ್ರಮ ಅವಶ್ಯ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಖಾತೆ ರಾಜ್ಯ ಸಚಿವರು).— ಮಾನ್ಯ ಅಧ್ಯಕ್ಷರೇ, ನರೇಗಲ್ಲಿನಲ್ಲಿ ೧೧೦/೧೧ ಕೆ. ವಿ. ೧೦ ಎಂ. ವಿ. ಎ. ಸಾಮರ್ಥ್ಯದ ಮಂತ್ರು ೧೧೦/೩೩, ೧೦ ಎಂ. ವಿ.ಎ. ಸಾಮರ್ಥ್ಯದ ಸ್ಟೇಷನ್ ಅನ್ನು ಸ್ಥಾಪಿಸಲಾಗ ತ್ತಿದೆ. ಅದಕ್ಕೆ ಬೇಕಾಗುವ ಟ್ರಾನ್ಸ್‌ಫಾರ್ಮರ್‌ಗೆ ಕ್ರಯಾದೇಶ ನೀಡಲಾಗಿದ್ದು, ಇದು ಸೆಪ್ಟೆಂಬರ್ ೮೮ ರಲ್ಲಿ ಸರಬರಾಜಾಗುವ ನಿರೀಕ್ಷೆ ಇದೆ. ಈ ಸ್ಟೇಷನ್ನಿನ ಪೂರ್ವಭಾವಿ ಕೆಲಸಗಳನ್ನು ಮುಂದಿನ ತಿಂಗಳು ಕೈಗೆತಿಗೊಳ್ಳಲಾಗುತ್ತದೆ. ಈ ಕೆಲಸಕ್ಕೆ ಹಣವನ್ನು ಈ ವರ್ಷದ ಆಯವ್ಯಯದಲ್ಲಿ ಅಳವಡಿಸಲಾಗಿದ್ದು, ಕೆಲಸವನ್ನು ಈ ಸಾಲಿನಲ್ಲಿ ಮಾಡಿ ಮುಗಿಸುವ ಕಾರ್ಯಕ್ರಮವಿದೆ.

ಗದಗದಿಂದ ನರೇಗಲ್ಲಿಗೆ ಸುಮಾರು ೨೮ ಕಿ. ಮೀ ಉದ್ದದ ೧೧೦ ಕೆ. ವಿ. ಲೈನ್ ಎಳೆಯಬೇಕಾಗಿದೆ ಇದರ ಸರ್ವೆ ಕೆಲಸ ಮುಗಿದಿದೆ. ಈ ಲೈನಿಗೆ ಟವರ್‌ಗಳನ್ನು ಸರಬರಾಜು ಮಾಡಲಾಗಿದೆ. ಲೈನಿನ ಕೆಲಸವನ್ನು ಕೂಲಿ ಗುತ್ತಿಗೆ ಮೇಲೆ ಇತ್ತೀಚೆಗೆ ಆಶೀರ್ವಾದ ಎಲೆಕ್ಟ್ರಿಕಲ್ಸ್‌ನವರಿಗೆ ನೀಡಲಾಗಿದೆ. ಲೈನು ಕೆಲಸವನ್ನು ಶೀಘ್ರದಲ್ಲೇ ಕೈಗೆತ್ತಿಗೆಗೊಳ್ಳಲಾಗುತ್ತದೆ. ಈ ಕೆಲಸವನ್ನು ಈ ಸಾಲಿನಲ್ಲಿ ಮಾಡಿ ಮುಗಿಸುವ ಕಾರ್ಯಕ್ರಮವಿದ್ದು ಇದಕ್ಕೆ ಈ ಸಾಲಿನ ಆಯವ್ಯಯದಲ್ಲಿ ಹಣ ಒದಗಿಸಲಾಗಿದೆ.

ಗಜೇಂದ್ರಗಡದಲ್ಲಿ ಒಂದು ೩೩/೧೧ ಕೆ ವಿ. ಗೆ ಎಂ. ವಿ. ಎ. ಸಾಮರ್ಥ್ಯದ ಸ್ಟೇಷನ್ ಅನ್ನು ಸ್ಥಾಪಿಸಲಾಗುತ್ತದೆ. ಸ್ಟೇಷನ್ನಿಗೆ ಬೇಕಾಗುವ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಸ್ಟೇಷನಿಗೆ ಬೇಕಾಗುವ ಕೆಲವು ಸಾಮಾಗ್ರಿ, ಪ್ಲಾಂಟಿನ ಉಪಕರಣಗಳಿಗೆ ಕ್ರಯಾದೇಶ ನೀಡಲಾಗಿದೆ. ಸ್ಟೇಷನ್ನಿನ ಸ್ಥಳದಲ್ಲಿ ನೆಲ ಸಮ ಮಾಡುವ ಇತ್ಯಾದಿ ಪೂರ್ವಭಾವಿ ಕೆಲಸಗಳು ಪ್ರಾರಂಭವಾಗಿವೆ. ಈ ಕೆಲಸವನ್ನು ಈ ಸಾಲಿನಲ್ಲಿ ಮುಗಿಸುವ ಕಾರ್ಯಕ್ರಮವಿದ್ದು, ಇದಕ್ಕೆ ಆಯವ್ಯಯದಲ್ಲಿ ಹಣ ಒದಗಿಸಲಾಗಿದೆ.

ನರೇಗಲ್ಲಿನಿಂದ ಗಜೇಂದ್ರಗಡಕ್ಕೆ ಬರುವ ಸುಮಾರು ೨೫ ಕಿ. ಮೀ. ಉದ್ದದ ೩೩ ಕೆ. ವಿ. ಲೈನಿನ ಕೆಲಸವನ್ನು ಈ ವರ್ಷವೇ ಪೂರ್ಣಗೊಳಿಸಲು ಕಾರ್ಯಕ್ರಮವಿದೆ.

೭ ಹಿರಿಯೂರು ತಾಲ್ಲೂಕಿನ ಕೊಡ್ಲಿಹಳ್ಳಿ ಗ್ರಾಮದ ಬಳಿ ವೇದಾವತಿ ಸುವರ್ಣಮುಖಿ ನದಿಗಳ ಸಂಗಮದಲ್ಲಿ ಸೇತುವೆ ನಿರ್ಮಿಸುವುದು,

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೆ, ಹಿರಿಯೂರು ತಾಲ್ಲೂಕಿನ ಕೊಡ್ಲಹಳ್ಳಿ ಗ್ರಾಮದ ಬಳಿ ಎರಡು ನದಿಗಳಾದ ವೇದಾವತಿ ಪುತ್ತು ಸುವರ್ಣಮುಖಿ ನದಿಗಳ ಸಂಗಮವಾಗುತ್ತದೆ. ಪ್ರತಿ ವರ್ಷವು ಶ್ರಾವಣಮಾಸದಲ್ಲಿ ' ಶ್ರೀ ಕೊಡ್ಲಿ ಸಂಗಮೇಶ್ವರ ' ಉತ್ಸವ ರಾಜ್ಯದ ಎಲ್ಲಾ ಭಾಗಗಳಿಂದಲೂ ಜನರನ್ನು ಆಕರ್ಷಿಸುವ ಅತಿ ಪುರಾತನವಾದ ಜಾತ್ರೆ, ಇಲ್ಲಿ ದನಗಳ ಜಾತ್ರೆಯು ಜನಪ್ರಿಯವಾದ ಆಗತ್ಯವಿದೆ. ಆದರೆ ಈ ಉತ್ಸವವು ಜರುಗುವ ಸಂದರ್ಭ ಮಳೆಗಾಲವಾದ್ದರಿಂದ ಎರಡು ನದಿಗಳು ಉಕ್ಕಿ ಹರಿಯುವ ದೃಶ್ಯ ಕಣ್ಣನ ಸೆಳೆಯುತ್ತದೆ. ಈ ಉತ್ಸವಕ್ಕೆ ಭಾಗವಹಿಸಿದ ಜನ ದೇವಸ್ಥಾನದ

ಬಳಿ ಇದ್ದರೆ ಅಲ್ಲಿಯೇ ಹಾಗೂ ನದಿಗಳ ಆಚೆಯ ಬದಿಗೆ ಇದ್ದರೆ ಅಲ್ಲಿಯೇ ಉಳಿಯಬೇಕಾದ ಅವ್ಯವಸ್ಥೆ ಇದ್ದಕ್ಕಿದ್ದಹಾಗೆ ಮಳೆ ಬಿದ್ದು ನದಿಗಳು ತುಂಬಿದರೆ ಸಂಭವಿಸುತ್ತದೆ. ಈ ಹಳ್ಳಿಗಾರರು ಮಳೆಗಾಲದಲ್ಲಿ ಊರಿನಿಂದ ಬೇರೆಡೆಗೆ ಹೋಗುವಂತಿಲ್ಲ. ಇದಕ್ಕೆ ಪರಿಹಾರ ಒಂದು ಸೇತುವೆ ನಿರ್ಮಾಣವಾಗಬೇಕು. ಇದನ್ನು ಜಿಲ್ಲಾ ಪರಿಷತ್‌ನಲ್ಲಿ ಮಾಡಿಸಬಹುದೆಂಬ ಉತ್ತರದಿಂದ ಸಾರ್ಥಕವಾಗಲಾರದು, ಬದಲಾಗಿ ರಾಜ್ಯ ಸರ್ಕಾರವೇ ತನ್ನ ಬಜೆಟ್‌ನಲ್ಲಿ ಸೇರಿಸಿಕೊಂಡು ಕಾರ್ಯಾರಂಭ ಪ್ರಾರಂಭಿಸಿದರೆ ಮೇಲಿನ ಎಲ್ಲಾ ಸಂದರ್ಭಕ್ಕೂ ರಾಮಬಾಣವಾಗುತ್ತದೆ ಎಂದು ಕೋರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಇದು ಜಿಲ್ಲಾ ಪರಿಷತ್‌ಗೆ ಸಂಬಂಧಪಟ್ಟಂಥ ವಿಚಾರ, ಅಲ್ಲಿ ಕೇಳುವುದಕ್ಕೆ ಆಗುವುದಿಲ್ಲ ಎಂದು ಸರ್ಕಾರವನ್ನು ಕೇಳುತ್ತಾ ಇದ್ದಾರೆ. ನಮ್ಮಲ್ಲಿ ಕಡೆ ಹಣ ಖರ್ಚು ಮಾಡುವುದಕ್ಕೆ ಅವಕಾಶವಿಲ್ಲ. ಜಿಲ್ಲಾ ಪರಿಷತ್‌ನವರಿಗೆ ಈ ಕೆಲಸವನ್ನು ತುರ್ತಾಗಿ ಮಾಡಿ ಕೊಡಬೇಕು ಎಂದು ಅವರಿಗೆ ಆದೇಶ ಕಳಿಸುತ್ತೇವೆ.

೮ ರಾಜ್ಯದಲ್ಲಿ ಪ್ರಕೃತಿ ವಿಕೋಪಕ್ಕೆ ಒಳಾದವರಿಗೆ ಅರಣ್ಯ ಇಲಾಖೆಯಿಂದ ಮರ ಮುಟ್ಟುಗಳನ್ನು ಖರೀದಿಸಲು ಧನಸಹಾಯ ಒದಗಿಸುವುದು.

ಶ್ರೀ ರಮಾನಾಥ ರೈ.—ಮಾನ್ಯ ಸಭಾಧ್ಯಕ್ಷರೆ, ರಾಜ್ಯದಲ್ಲಿ ಪ್ರಕೃತಿ ವಿಕೋಪಕ್ಕೆ ಒಳಗಾದ ನತದೃಷ್ಟರಿಗೆ ಸರಕಾರವು ಕಂದಾಯ ಇಲಾಖೆಯ ಶಿಫಾರಸ್ಸಿನಂತೆ ರೂ. ೫,೦೦೦-೦೦ ಬೆಲೆಬಾಳುವ ಮರ ಮುಟ್ಟುಗಳನ್ನು ಅರಣ್ಯ ಇಲಾಖೆಯಿಂದ ಕೊಡಿಸುವ ವ್ಯವಸ್ಥೆ ಇದೆ ಆದರೆ ಕಂದಾಯ ಇಲಾಖೆಯವರು ಶಿಫಾರಸ್ಸು ಮಾಡಿದರೂ ಅರಣ್ಯ ಇಲಾಖೆಯವರು ತತ್ವಶಃ ಅದನ್ನು ಪಾಲಿಸುವುದಿಲ್ಲ. ಅಲ್ಲದೆ ಮರಮಂಟ್ಟುಗಳನ್ನು ದಾಸ್ತಾನಿಲ್ಲ ಎಂಬ ನೆಪವೊಡ್ಡಿ ಬೇರೆ ಬೇರೆ ಸಬ್ ಡಿವಿಜನ್‌ಗೆ ಜನರನ್ನು ಅಲೆದಾಡಿಸುತ್ತಾರೆ. ಕೊನೆಗೆ ಮರ ಒದಗಿಸಿದರೂ ಅದು ಕಳಪೆ ದರ್ಜೆಯದಾಗಿರುತ್ತದೆ. ಮರ ದೊರೆಯುವ ಮೊದಲೇ ಅಲೆದಾಡಲು ಹಣ ಖರ್ಚಾಗಿರುತ್ತದೆ. ಈ ಅನ್ಯಾಯವನ್ನು ತಪ್ಪಿಸಲು ಸದರಿ ಪ್ರಕೃತಿ ವಿಕೋಪಕ್ಕೆ ಒಳಗಾದವರಿಗೆ ಮರ ಮುಟ್ಟುಗಳನ್ನು ಖರೀದಿಸಲು ಕಂದಾಯ ಇಲಾಖೆಯ ಮೂಲಕ ನೇರ ಧನ ಸಹಾಯ ಒದಗಿಸುವಂತೆ ಕ್ರಮ ಕೈಕೊಳ್ಳಬೇಕಾಗಿ ಈ ಮೂಲಕ ಕೇಳಿ ಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರ ತರಿಸಿಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೆ, ಈಗ ಒಂದು ಪ್ರಶ್ನೆ ಅಲ್ಲಿ ಕೌನ್ಸಿಲ್ ನಡೆಯುತ್ತಿದೆಯೇ ?

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಆರ್. ಎನ್, ನಾಯಕ್.—ನಾನು ಕೊಡುತ್ತೇನೆ. ಅಲ್ಲಿ ಕೌನ್ಸಿಲ್ ನಡೆಯುತ್ತಿದೆಯೇ ?

ಅಧ್ಯಕ್ಷರು.—ತಾವು ಮಧ್ಯದಲ್ಲಿ ಈ ರೀತಿ ಇಂಟರ್‌ಫಿಯರ್ ಮಾಡುವುದು ಬೇಡ. ನೋಡಿ ನಾಯಕರೆ, ನಿಮಗೆ ಹೇಳುತ್ತೇನೆ. ನೀವು ಈ ರೀತಿ ಸಭೆ ನಡೆಸುವುದಕ್ಕೆ ಇಂಟರ್‌ಫಿಯರ್ ಮಾಡಿದರೆ.....

ಶ್ರೀ ಆರ್. ಎನ್, ನಾಯಕ್.—ಈ ಸಭೆ ನಡೆಯಬೇಕಾದರೆ ತಾವು ಅಲ್ಲಿ ಕುಳಿತಿರಬೇಕು ಮಂತ್ರಿಗಳು ಅಲ್ಲಿ ಇರಬೇಕು. ನಾವು ಇರಬೇಕು ಆಗ ಮಾತ್ರ ಸಭೆ ನಡೆಯುತ್ತದೆ.

ಅಧ್ಯಕ್ಷರು.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದರಿಂದ ಟೈಂ ಆಗುತ್ತಿದೆ ಎಂದು ಇದೆ, ಬ್ಯಾಲೆಟ್‌ಗೆ ಹಾಕಬೇಕಾಗುತ್ತದೆ

ಶ್ರೀ ಆರ್. ಎನ್. ನಾಯಕ್.—ಇಲ್ಲಿ ಟೈಂ ಪಾಸ್ ಮಾಡುವುದು ಮುಖ್ಯವಲ್ಲ. ಏನಾದರೂ ಸಮಸ್ಯೆಯ ಪರಿಹಾರವಾಗಬೇಕು. ಈಗ ಕೌನ್ಸಿಲ್ ನಡೆಯುತ್ತಿದೆಯೇ ಹೇಳಿ, ಮಾನ್ಯ ಮಂತ್ರಿಗಳು ಎಲ್ಲಿ ಹೋಗಿದ್ದಾರೆ.

ಅಧ್ಯಕ್ಷರು.—ಈಗ ತಾವಿಬ್ಬರೂ ಕುಳಿತುಕೊಳ್ಳುತ್ತೀರೋ ಇಲ್ಲವೋ ? ಶಿಸ್ತಿನಲ್ಲಿ ಯಾರಿಗೂ ಏನೂ ಮಾತನಾಡುವುದಕ್ಕೆ ಅವಕಾಶವಿಲ್ಲ. I will not allow anybody to speak.